**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 726/2023**

| | | |
|---|---|---|
| ಹೆಸರು | ಸಿ ಆರ್ ರಂಗಸ್ವಾಮಿ | PW –1 |
| ತಂದೆಯ ಹೆಸರು | ರಾಜಪ್ಪ | CW –1 |
| ವಯಸ್ಸು | 47 ವರ್ಷ | |
| ಉದ್ಯೋಗ | ಅಬಕಾರಿ ಉಪ ನಿರೀಕ್ಷಕರು, ಉಪ ವಿಭಾಗ, ದಾವಣಗೆರೆ | ದಿನಾಂಕಃ 05.03.2025 |
| ವಾಸ | ದಾವಣಗೆರೆ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಸನ್ 2022 ರಿಂದ ಇಲ್ಲಿಯವರೆಗೆ ನಾನು ಅಬಕಾರಿ ಉಪ ನಿರೀಕ್ಷಕನಾಗಿ ದಾವಣಗೆರೆ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 21.03.2023 ರಂದು ಬೆಳಿಗ್ಗೆ 11.45 ಗಂಟೆ ಸಮಯದಲ್ಲಿ ರಾಜ್ಯ ಹೆದ್ದಾರಿ ಹರಿಹರ ಶಿವಮೊಗ್ಗ ರಸ್ತೆಯ ಬೆಳ್ಳುಡಿ ಕ್ರಾಸ್ ವೃತ್ತದ ಬಳಿ ನಾನು ಮತ್ತು ನನ್ನ ಸಿಬ್ಬಂದಿ ಚಾಸಾ 4 ಮತ್ತು 5 ರವರೊಂದಿಗೆ ಇಲಾಖಾ ವಾಹನದಲ್ಲಿ ರಸ್ತೆಗಾವಲು ಕರ್ತವ್ಯದಲ್ಲಿದ್ದಾಗ, ಸದರಿ ವೃತ್ತದ ಬಳಿ ನಿಂತಿದ್ದ ಚಾಸಾ 2 ಮತ್ತು 3 ರವರಿಗೆ ಪಂಚರಾಗಲು ನೋಟಿಸನ್ನು ಜಾರಿ ಮಾಡಿ, ಸಹಕರಿಸಲು ಕೇಳಿಕೊಂಡ ಮೇರೆಗೆ ಅವರುಗಳು ಒಪ್ಪಿದ ಮೇರೆಗೆ ಅಲ್ಲಿಯೇ ರಸ್ತೆಗಾವಲು ಮಾಡುತ್ತಿರುವಾಗ ಬನ್ನಿಕೋಡು ಗ್ರಾಮದ ರಸ್ತೆ ಕಡೆಯಿಂದ ಒಬ್ಬ ವ್ಯಕ್ತಿಯು ದ್ವಿಚಕ್ರ ವಾಹನದಲ್ಲಿ ಒಂದು ಬಿಳಿ ಚೀಲವನ್ನು ಇಟ್ಟುಕೊಂಡು ಬರುತ್ತಿದ್ದು, ನಾವುಗಳು ಆತನನ್ನು ತಡೆದು ನಿಲ್ಲಿಸಿ, ಚೀಲದಲ್ಲಿ ಏನು ಇದೆ ಎಂದು ಕೇಳಿದಾಗ ಆತನು ಗಾಬರಿಗೊಂಡಿರುತ್ತಾರೆ. ಸದರಿ ಚೀಲವನ್ನು ಶೋಧನೆ ಮಾಡಲು ನ್ಯಾಯಾಲಯದ ಅನುಮತಿ ಪಡೆಯಲು ಸಮಯಾವಕಾಶ ಇಲ್ಲದೇ ಇದ್ದುದ್ದರಿಂದ, ಅಲ್ಲಿಯೇ ಕಲಂ 54 ರ ಕ.ಅ.ಅ. ಪ್ರಕಾರ ಪಂಚಾರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಅವರ ಸಹಿ ಪಡೆದು ಶೋಧನಾ ಸಮುಚಿತ ಆಧಾರ ವನ್ನು ತಯಾರಿಸಿರುತ್ತೇನೆ.

ನಂತರ ಸದರಿ ಚೀಲವನ್ನು ಪರಿಶೀಲಸಿಸಲಾಗಿ ಅದರಲ್ಲಿ 90 ಎಂ ಎಲ್ ನ 140 ಹೈವರ್ಡ್ಸ ಚಿಯರ್ಸ ವಿಸ್ಕಿ ಇರುವ ಟೆಟ್ರಾ ಪ್ಯಾಕ್ ಗಳು ಇರುವುದು ಕಂಡುಬಂದಿರುತ್ತದೆ. ಸದರಿ ಬೈಕ್ ನಂ. ಕೆ ಎ 17 ಡಬಲ್ಯೂ 4239 ಟಿ ವಿ ಎಸ್ ಕಂಪನಿಯ ಸ್ಟಾರ್ ಸಿಟಿ ಬೈಕ್ ಆಗಿರುತ್ತದೆ. ಸದರಿ ಮದ್ಯವನ್ನು ಸಾಗಾಟ ಮಾಡಲು ಯಾವುದಾದರೂ ಪರವಾನಿಗೆ ಇದೆಯೇ ಎಂದು ಕೇಳಿದಾಗ ಆತನು ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ದೊರೆತ ಮದ್ಯದಿಂದ 30 ಟೆಟ್ರಾ ಪ್ಯಾಕ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆಯಾಲಾಯಿತು. ಅವುಗಳನ್ನು ಒಂದು ಬಿಳಿ ಚೀಲದಲ ಹಾಕಿ, ಸೀಲ್ ಮಾಡಿ, ಪಂಚರ ಸಹಿಯುಳ್ಳ ಚೀಟಿಗಳನ್ನು ಅಂಟಿಸಿ ಪಂಚನಾಮೆ ಜರುಗಿಸಿ ಜಪ್ತುಪಡಿಸಿಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು

ಬೆಳಿಗ್ಗೆ 11.45 ರಿಂದ 12.45 ಗಂಟೆವರೆಗೆ ಜರುಗಿಸಲಾಯಿತು. ನಂತರ ಆರೋಪಿಗೆ ಕಲಂ 41(ಎ) ಸಿ ಆರ್ ಪಿ ಸಿ ರೀತ್ಯ ನೋಟಿಸನ್ನು ಜಾರಿ ಮಾಡಿರುತ್ತೇನೆ. ನಂತರ ಜಪ್ತುಪಡಿಸಿಕೊಂಡ ಮಾಲು, ಪಂಚನಾಮೆ ಮತ್ತು ಮಾಲು ಪಟ್ಟಿ, ಮಾದರಿ ಸೀಲಿನ ನಕಲು ಜೊತೆ ಠಾಣೆಗೆ ಹಾಜರಾಗಿ ಸ್ವ ಪಿರ್ಯಾದಿಯನ್ನು ತಯಾರಿಸಿ, ಠಾಣಾ ಗುನ್ನೆ ನಂ.80/2022-23 ರಂತೆ ಪ್ರಕರಣವನ್ನು ದಾಖಲಿಸಿ, ಪ್ರವವ ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸದರಿ ಶೋಧನಾ ಸಮುಚಿತ ಆಧಾರದ ದಾಖಲೆಯನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು, ಮಾಲು ಪಟ್ಟಿ ಸಂಖ್ಯೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು, ಮಾದರಿ ಸೀಲ್ ನಮೂನೆಯನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಸದರಿ ಪಿರ್ಯಾದಿಯನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು, ಪ್ರವವ ವರದಿಯನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ 6(ಎ) ಎಂದು ಗುರುತಿಸಲಾಯಿತು. ಕಛೇರಿ ಮಾಲು ಪಟ್ಟಿಯನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿಯನ್ನು ಮತ್ತು ಹಾಜರುಪಡಿಸಿದ ಮದ್ಯದ ಟೆಟ್ರಾ ಪ್ಯಾಕ್‌ಗಳನ್ನು ನೋಡಿ ಗುರುತಿಸುತ್ತಾರೆ. ಸದರಿ ಮದ್ಯದ 30 ಟೆಟ್ರಾ ಪ್ಯಾಕ್ ಗಳನ್ನು ಮತ್ತು ಒಂದು ಚೀಲವನ್ನು ಮು.ಮಾ 1 ಮತ್ತು 2 ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ 9 ರವರಿಗೆ ನಿವೇದಿಸಿಕೊಂಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ದಿನಾಂಕ 21.03.2023 ರಂದು ನಾನು ಗಸ್ತು ಕರ್ತವ್ಯದಲ್ಲಿದ್ದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ರಸ್ತೆಗಾವಲು ಕರ್ತವ್ಯವನ್ನು ನಾನು 11.30 ಗಂಟೆಯಿಂದ ಪ್ರಾರಂಭಿಸಿರುತ್ತೇನೆ. ರಸ್ತೆಗಾವಲು ಮಾಡುವ ಕಾಲಕ್ಕೆ ಎಷ್ಟು ವಾಹನವನ್ನು ತಪಾಸಣೆ ಮಾಡಲಾಗಿದೆ ಎಂದರೆ ಸಾಕ್ಷಿಯು ಸುಮಾರು 10 ವಾಹಗಳನ್ನು ತಪಾಸಣೆ ಮಾಡಿದ್ದೇನೆ. ಸದರಿ ವಾಹಗಳ ತಪಾಸಣೆ ಮಾಡಿದ ಬಗ್ಗೆ ದಾಖಲೆ ಇದೆ ಎಂದರೆ ಸರಿ. ನಾವು ಘಟನಾ ಸ್ಥಳಕ್ಕೆ ಇಲಾಖಾ ವಾಹನದಲ್ಲಿ ಹೋದ ಬಗ್ಗೆ ಮತ್ತು ಅದರ ನೋಂದಣಿ ಸಂಖ್ಯೆ ದೂರಿನಲ್ಲಿ ನಮೂದು ಇಲ್ಲ ಎಂದರೆ ಸರಿ. ಘಟನಾ ಸ್ಥಳದ ರಸ್ತೆಯಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಘಟನಾ ಸ್ಥಳದ ಸುತ್ತಮುತ್ತ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸರಿ. ಚಾಸಾ 2 ಮತ್ತು 3 ರವರು ಘಟನಾ ಸ್ಥಳದ ಸ್ಥಳೀಕರಲ್ಲ ಎಂದರೆ ಸರಿ. ಆರೋಪಿತರ ಬಳಿ ಜಪ್ತುಪಡಿಸಿಕೊಂಡ ಎಲ್ಲಾ ಮುದ್ದೇ ಮಾಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ನಿಪಿ 2 ಪಂಚನಾಮೆಯಲ್ಲಿ ಮು.ಮಾ 1 ರ ಮೇಲಿರುವ ಭದ್ರತಾ ಚೀಟಿ, ಸಂಖ್ಯ ಮತ್ತು ಇತರೆ ವಿವರಣೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಮು.ಮಾ 1 ಮತ್ತು 2 ರಂತೆ ಇರುವ ಮದ್ಯದ ಟೆಟ್ರಾ ಪ್ಯಾಕ್ ಗಳು ಮತ್ತು ಚೀಲ ಸಾಮಾನ್ಯವಾಗಿ ಎಲ್ಲಕಡೆ ಸಿಗುತ್ತವೆ ಎಂದರೆ ಸರಿ. ನಿಪಿ 2 ನ್ನು ಚಾಸಾ 5 ರವರು ಬರೆದಿರುತ್ತಾರೆ. ನಿಪಿ 2 ನ್ನು ಬರೆದವರ ಯಾರು ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ಸದರಿ ಮದ್ಯದ ಟೆಟ್ರಾ ಪ್ಯಾಕ್‌ಗಳನ್ನು ಯಾವ ಅಂಗಡಿಯಿಂದ ತೆಗೆದುಕೊಂಡು ಬಂದಿದ್ದಾರೆ ಎಂದು ವಿಚಾರಣೆ ಮಾಡಿಲ್ಲ ಎಂದರೆ ಸರಿ. ಮು.ಮಾ 1 ನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಿಪಿ 2 ಪಂಚನಾಮೆಯನ್ನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಛಾಯಾಚಿತ್ರವನ್ನು ತೆಗೆದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿ, ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮು ಮಾ 1 ಮತ್ತು 2 ಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತನ ವಿರುದ್ಧ ಸುಳ್ಳು ಪ್ರರಣವನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್‌ಎಫ್ ಸಿ ನ್ಯಾಯಾಲಯ, ಹರಿಹರ.